# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ 785/2020

ಪ್ರಮಾಣ ವಚನ ಬೋಧಿಸಲಾಯಿತು

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶೇಖರ್ | ಚಾಸಾ- 5 |
| **ತಂದೆಯ ಹೆಸರು** | ಃ ಮುದ್ದೇಗೌಡ | ಪ್ರಾಸಾ- 8 |
| **ವಯಸ್ಸು** | ಃ 45 ವರ್ಷ | |
| **ಉದ್ಯೋಗ** | ಃ ವ್ಯವಸಾಯ | |
| **ವಾಸ** | ಕುಂದೂರು | ದಿನಾಂಕಃ 12.11.2025 |

**ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ**

ಸಾಕ್ಷಿಯು ನಿಪಿ**-3** ರಲ್ಲಿ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ**-3**(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಜಮೀನಿನ ಬಳಿ ಹೋಗುತ್ತಿದ್ದಾಗ ಪೋಲಿಸ್ ರವರು ಸಹಿ ಮಾಡಲು ಕೇಳಿದ್ದರಿಂದ ಮಾಡಿರುತ್ತೇನೆ. ನನ್ನ ಜೊತೆಗೆ ಬೇರೆ ಯಾರು ಸಹಿ ಮಾಡಿದ್ದರೆ ಎಂದು ನನಗೆ ಗೊತ್ತಿಲ್ಲ. ನಿಪಿ**-3** ರಲ್ಲಿ ಇರುವ ವಿಚಾರ ಗೊತ್ತಿಲ್ಲ .

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನುರಿತ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.** ದಾಖಲೆಗಳನ್ನು ಪರಿಶೀಲಿಸಿ **ಸಾಕ್ಷಿಯನ್ನು** ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ **ಪಾಟೀ ಸವಾಲು ಮಾಡಲು ಅನುಮತಿ**ಸಲಾಯಿತು)

**ಪಾಟೀ ಸವಾಲು ಃ-** ಶ್ರೀಮತಿ ಎ.ಪಿ.ಪಿ ರವರಿಂದ

ದಿಃ **24.06.2020** ರಂದು ಮಹಜರ್ ಮಾಡಿರುತ್ತಾರೆ, ಚಾಸಾ**-4** ರವರು ತೋರಿಸಿದ ಸ್ಥಳದಲ್ಲಿ ಪೋಲಿಸಿ ರವರು ಮಹಜರ್ ಜರುಗಿಸಿದ್ದು ಅದಕ್ಕೆ ನಾನು ಚಾಸಾ**-4, 6** ರವರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ .ಸದರಿ ಮಹಜರ್ ನ್ನು ಮ **3.00** ರಿಂದ **3.45** ಗಂಟೆಯವರಿಗೂ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಯ ಪರ ವಕೀಲರಿಂದಃ

ಏನು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಃ- ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಓ.,**

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ